## ಕರ್ನಾಟಕ ಸರ್ಕಾರ

ಸಂಖ್ಯೆ: ಅಪಜೀ 31 ಇಎನ್‌ಜಿ 2016

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:04.04.2018.

## ತಿದ್ದುಪಡಿ ಅಧಿಸೂಚನೆ

ದಿನಾಂಕ: 11.03.2016 ರ ಕರ್ನಾಟಕ ವಿಶೇಷ ರಾಜ್ಯ ಪತ್ರಿಕೆ ಭಾಗ – IVA ಸಂಖ್ಯೆ: 373 ರಲ್ಲಿನ ಅಧಿಕೃತವಾಗಿ ಪ್ರಕಟಗೊಂಡಿರುವ ಅಧಿಸೂಚನೆ ಸಂಖ್ಯೆ: ಅಪಜೀ 17 ಇಪಿಸಿ 2012, ದಿನಾಂಕ: 11.03.2016 ರಲ್ಲಿ ಕೆಳಕಂಡ ತಿದ್ದುಪಡಿಗಳನ್ನು ಸೇರ್ಪಡೆಗೊಳಿಸಲಾಗಿದೆ.

1. ನಿರ್ದೇಶನದ ಕಂಡಿಕೆ 1 ರಲ್ಲಿ "ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್" ಪದಗಳಿಗೆ ಬದಲಾಗಿ "ಪ್ಲಾಸ್ಟಿಕ್ ಬ್ಯಾಗ್" ಅಳವಡಿಸಿಕೊಳ್ಳತ್ತಕ್ಕದ್ದು.
2. ನಿರ್ದೇಶನದ ಕಂಡಿಕೆ 3 ರ ಅಡಿಯಲ್ಲಿನ ವಿವರಣೆ–2 ಕ್ಕೆ ಈ ಕೆಳಗಿನ ವಿವರಣೆಯನ್ನು ಅಳವಡಿಸಿಕೊಳ್ಳತ್ತಕ್ಕದ್ದು.

   "ಪ್ಲಾಸ್ಟಿಕ್ ಬ್ಯಾಗ್" ಎಂದರೆ ವಸ್ತುಗಳನ್ನು ಸಾಗಿಸಲು ಅಥವಾ ವಿತರಣೆ ಮಾಡಲು ಬಳಸುವಂತಹ ಪ್ಲಾಸ್ಟಿಕ್‌ನಿಂದ ಅಥವಾ ಕಂಪೋಸ್ಟೇಬಲ್ ಪ್ಲಾಸ್ಟಿಕ್‌ನಿಂದ ತಯಾರಿಸಿರುವ ಚೀಲಗಳು. ಈ ವ್ಯಾಖ್ಯಾನದಲ್ಲಿ ಯಾವುದೇ ಸಾಮಗ್ರಿಗಳನ್ನು ಬಳಸುವುದಕ್ಕೆ ಮೊದಲು ಪ್ಯಾಕ್ ಮಾಡಿ ಸೀಲ್ ಮಾಡಿರುವ ಪ್ಯಾಕೇಜಿಂಗ್ ಪ್ಲಾಸ್ಟಿಕ್‌ಗಳು ಸೇರಿರುವುದಿಲ್ಲ.'"
3. ನಿರ್ದೇಶನದ ಪ್ಯಾರ–1 ರ 3 ಮತ್ತು 7ನೇ ಸಾಲಿನಲ್ಲಿ "ಪ್ಲಾಸ್ಟಿಕ್ ಚಮಚ" ಮತ್ತು "ಕ್ಲಿಂಗ್ ಫಿಲ್ಮ್ಸ್" ನಡುವೆ "ಪ್ಲಾಸ್ಟಿಕ್ ಸ್ಟ್ರಾ" ಪದಗಳನ್ನು ಸೇರ್ಪಡೆಗೊಳಿಸತಕ್ಕದ್ದು.

ಮೇಲ್ಕಂಡ ಅಧಿಸೂಚನೆಯಲ್ಲಿ ಇದನ್ನು ಹೊರತುಪಡಿಸಿ ಉಳಿದಂತ ಅಂಶಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

4/4/2018

(ಹೆಚ್. ಸಿ. ರಾಜೇಂದ್ರ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ
ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ ಬೆಂಗಳೂರು

ಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ – ಇವರಿಗೆ ಇಂದಿನ ಸಂಚಿಕೆಯಲ್ಲಿ ಪ್ರಕಟಿಸಿ ಅದರ 200 ಪ್ರತಿಗಳನ್ನು ಇಲಾಖೆಯ ಉಪಯೋಗಕ್ಕಾಗಿ ಒದಗಿಸುವಂತೆ ಕೋರಿದೆ.

ಪ್ರತಿಯನ್ನು:

1. ಮಹಾಲೇಖಪಾಲರು (ಕರ್ನಾಟಕ), ಬೆಂಗಳೂರು.

..2

2. ಮಾನ್ಯ ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
4. ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, "ಪರಿಸರ ಭವನ" 1 ರಿಂದ 5ನೇ ಮಹಡಿ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001.
5. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
6. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
7. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
8. ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು.
9. ಎಲ್ಲಾ ಸ್ಥಳೀಯ ಸಂಸ್ಥೆಗಳ ಆಯುಕ್ತರು/ಮುಖ್ಯಾಧಿಕಾರಿಗಳು.
10. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
11. ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
12. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರ ಹಿರಿಯ ಆಪ್ತ ಕಾರ್ಯದರ್ಶಿ
13. ಸರ್ಕಾರದ ಕಾರ್ಯದರ್ಶಿಗಳು (ಪರಿಸರ ಮತ್ತು ಜೀವಿಶಾಸ್ತ್ರ), ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರ ಹಿರಿಯ ಆಪ್ತ ಕಾರ್ಯದರ್ಶಿ.
14. ಹೆಚ್ಚುವರಿ ಪ್ರತಿಗಳು / ಶಾಖಾ ರಕ್ಷಾ ಕಡತಕ್ಕೆ.

## GOVERNMENT OF KARNATAKA

No. FEE 31 ENG 2016

Karnataka Government Secretariat
M.S. Building
Bangalore, dated: 04.04.2018

## CORRIGENDUM NOTIFICATION

Following corrections shall be incorporated in the Notification No. FEE 17 EPC 2012, Bangalore dated 11.03.2016 officially published in the Special Gazette Part -IVA at No. 373 of the Karnataka State Gazette dated March 11, 2016.

1. In para-1 of the direction for the words "Plastic Carry Bags" the words "Plastic Bags" shall be substituted.
2. For the explanation-2 under, para-3 of the direction the following shall be substituted.

   "Plastic Bag" means bags made from plastic material or compostable plastic material, used for the purpose of carrying or dispensing commodities but do not include bags that constitute or form an integral part of the packaging in which goods are sealed prior to use."
3. The word "Plastic Straw" shall be inserted in para 1 of the direction in line 3 and 7 after the words "plastic spoon" and before the words "Cling Films".

Rest of the contents in the aforesaid Notification remain unaltered.

By order and in the name of the
Governor of Karnataka,

4/2018

(H. C. Rajendra Kumar)
Under Secretary to Government
Forest, Ecology & Environment Department
Karnataka Government Secretariat
M. S. Building, Bengaluru

**To:**

The Compiler, Karnataka State Gazette - with a request to publish in the forthcoming issue and arrange to furnish 200 copies for Departmental use.

**Copy to:**

1. The Accountant General (Karnataka), Bengaluru.

2. Additional Chief Secretary to Hon'ble Chief Minister of Karnataka, Vidhana Soudha, Bengaluru.
3. All Additional Chief Secretaries/Principal Secretaries/Secretaries to Government.
4. The Member Secretary, Karnataka State Pollution Control Board, "Parisara Bhavana", 1st to 5th Floor, No. 49, Church Street, Bengaluru - 560 001.
5. The Commissioner, Bruhat Bengaluru Mahanagara Palike, Bengaluru.
6. The Director, Municipal Administration Directorate, Bengaluru.
7. Deputy Commissioners of all Districts.
8. Chief Executive Officers, Zilla Panchayath of all Districts.
9. All Commissioners/Chief Officers of local bodies in the State.
10. PS to Chief Secretary to Government of Karnataka, Vidhana Soudha, Bengaluru.
11. PS to Hon'ble Minister for Forest, Ecology and Environment, Vidhana Soudha, Bengaluru.
12. PS to Additional Chief Secretary to Government, Forest, Ecology and Environment Department, M. S. Building, Bengaluru.
13. PS to Secretary to Government (Ecology & Environment), Forest, Ecology and Environment Department, M. S. Building, Bengaluru.
14. Copies / Guard File.

## ಕರ್ನಾಟಕ ಸರ್ಕಾರ

**ಸಂಖ್ಯೆ:** ಅಪಜೀ 31 ಇಎನ್‌ಜಿ 2016 (ಭಾ-6)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:26.03.2018.

## ಸೇರ್ಪಡೆ ಆದೇಶ

ಸರ್ಕಾರಿ ಅಧಿಸೂಚನೆ ಸಂಖ್ಯೆ: ಅಪಜೀ 17 ಇಪಿಸಿ 2012, ದಿನಾಂಕ: 11.03.2016 ರ ಪ್ಲಾಸ್ಟಿಕ್ ಬಳಕೆಯ ನಿಷೇಧ ಅಧಿಸೂಚನೆಯ ನಿರ್ದೇಶನದ ಕಂಡಿಕೆ -2 ರ ಕ್ರಮ ಸಂಖ್ಯೆ: (ಓ) ನಂತರ ಈ ಕೆಳಕಂಡ ಅಧಿಕಾರಿಗಳನ್ನು ಅನುಷ್ಠಾನಾಧಿಕಾರಿಗಳೆಂದು ಸೇರ್ಪಡೆಗೊಳಿಸಿ ಆದೇಶಿಸಲಾಗಿದೆ.

ಔ. ಪೋಲೀಸ್ ಅಧಿಕಾರಿಗಳು

ಅಂ. ಆಹಾರ ಸುರಕ್ಷತಾ ಆಯುಕ್ತಾಲಯದ ಅಂಕಿತಾಧಿಕಾರಿಗಳು ಮತ್ತು ಆಹಾರ ಸುರಕ್ಷತಾಧಿಕಾರಿಗಳು

ಈ ಸೇರ್ಪಡೆಯನ್ನು ಸದರಿ ಅಧಿಸೂಚನೆಯ ಭಾಗವಾಗಿ ಓದಿಕೊಳ್ಳತಕ್ಕದ್ದು. ಮೇಲ್ಕಂಡ ಅಧಿಸೂಚನೆಯ ಉಳಿದಂತ ಅಂಶಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹೆಚ್. ಸಿ ರಾಜೇಂದ್ರ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.

ಗೆ, 17/4

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ - ಇವರಿಗೆ ಇಂದಿನ ಸಂಚಿಕೆಯಲ್ಲಿ ಪ್ರಕಟಿಸಿ ಅದರ 400 ಪ್ರತಿಗಳನ್ನು ಇಲಾಖೆಯ ಉಪಯೋಗಕ್ಕಾಗಿ ಒದಗಿಸುವಂತೆ ಕೋರಿದೆ.

**ಪ್ರತಿಯನ್ನು:**

1. ಮಹಾಲೇಖಪಾಲರು (ಕರ್ನಾಟಕ), ಬೆಂಗಳೂರು.
2. ಮಾನ್ಯ ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು , ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು.

06/04/18
6/4/18

..2

6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.
7. ಪೋಲೀಸ್ ಮಹಾ ನಿರ್ದೇಶಕರು, ರಾಜ್ಯ ಪೋಲೀಸ್ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
8. ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, "ಪರಿಸರ ಭವನ" 1 ರಿಂದ 5ನೇ ಮಹಡಿ, ಚರ್ಚ್ ಸ್ಟ್ರೀಟ್, ಬೆಂಗಳೂರು-560 001.
9. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
10. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
11. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
12. ಎಲ್ಲಾ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಹಾಗೂ ಉಪ ಕಾರ್ಯದರ್ಶಿಗಳು
13. ಎಲ್ಲಾ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಹಣಾ ಅಧಿಕಾರಿಗಳು
14. ಎಲ್ಲಾ ಗ್ರಾಮ ಪಂಚಾಯತ್‌ಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು
15. ಎಲ್ಲಾ ಸ್ಥಳೀಯ ಸಂಸ್ಥೆಗಳ ಆಯುಕ್ತರು/ಮುಖ್ಯಾಧಿಕಾರಿಗಳು.
16. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ), ವಿಧಾನಸೌಧ, ಬೆಂಗಳೂರು.
17. ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
18. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರ ಹಿರಿಯ ಆಪ್ತ ಕಾರ್ಯದರ್ಶಿ
19. ಸರ್ಕಾರದ ಕಾರ್ಯದರ್ಶಿಗಳು (ಪರಿಸರ ಮತ್ತು ಜೀವಿಶಾಸ್ತ್ರ), ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರ ಪತ್ರಾಂಕಿತ ಆಪ್ತ ಸಹಾಯಕರು.
20. ಹೆಚ್ಚುವರಿ ಪ್ರತಿಗಳು / ಶಾಖಾ ರಕ್ಷಾ ಕಡತಕ್ಕೆ.

**GOVERNMENT OF KARNATAKA**

No. FEE 31 ENG 2016 (P6)

Karnataka Government Secretariat
M.S. Building
Bangalore, dated:26.03.2018

**ADDENDUM**

The following officers shall be added after Sl.No (l) as enforcement officers in Para -2 of the direction in Notification No. FEE 17 EPC 2012, dated: 11.03.2016 of banning use of plastic.

m) Police Officers,
n) Designated Officers and Food Safety Officers of Commissionerate of Food Safety

This addition shall be read as part and parcel of the said Notification. Rest of the contents in the above mentioned Notification shall remain unchanged.

By Order and in the Name of the
Governor of Karnataka,

**(H.C Rajendra Kumar)**
Under Secretary to Government (I/c),
(Ecology and Environment)
Forest, Ecology and Environment Dept.,

**To,**

The Compiler, Karnataka Gazette, Bangalore with a request to publish in the extraordinary Gazette and to supply 50 copies.

**Copy To,**

1. The Accountant General Karnataka, Bangalore.
2. Additional Chief Secretary to Chief Minister of Karnataka, Vidhana Soudha, Bengaluru.
3. All Additional Chief Secretaries/Principal Secretaries/Secretaries to Government.

4. The Additional Chief Secretary to Government, Home Department, Vidhana Soudha, Bangalore.

5. The Additional Chief Secretary to Government, Health and Family Welfare Department, Vikasa Soudha, Bangalore

6. Principal Secretary to Government to Rural Development and Panchayath Raj Department, M.S Building , Bangalore.

7. Inspector General of Police, State Police Department, Nrupathunga Road, Bangalore.

8. The Member Secretary, Karnataka State Pollution Control Board, "Parisara Bhavana", 1st to 5th Floor, No. 49, Church Street, Bengaluru - 560 001.

9. The Commissioner, BBMP.

10. The Director, Municipal Administration, Bengaluru.

11. Deputy Commissioners of all Districts.

12. Chief Executive Officers, Zilla Panchayath of all Districts and Deputy Secretaries of Zilla Panchayath

13. Chief Executive Officers of all Taluka Panchayath

14. Panchayath Development officers of all Gram Panchayaths

15. All Commissioners/Chief Officers of local bodies in the State.

16. PS to Chief Secretary to Government of Karnataka (Cabinet), Vidhana Soudha, Bengaluru.

17. PS to Hon'ble Minister for Forest, Ecology and Environment, Vidhana Soudha, Bengaluru.

18. PS to Additional Chief Secretary to Government, Forest, Ecology and Environment Department, M. S. Building, Bengaluru.

19. PS to Secretary to Government (Ecology & Environment), Forest, Ecology and Environment Department, M. S. Building, Bengaluru.

20. Copies / Guard File.

**ಸರ್ಕಾರಿ ಅಧಿಸೂಚನೆ ಸಂಖ್ಯೆ: ಅಪಜೀ 17 ಇಪಿಸಿ 2012, ದಿನಾಂಕ: 11.03.2016 ರನ್ವಯ ಜಾರಿಗೊಳಿಸಲಾಗಿರುವ ಪ್ಲಾಸ್ಟಿಕ್ ನಿಷೇಧ ಅನುಷ್ಠಾನಕ್ಕೆ ಸಂಬಂಧಪಟ್ಟಂತೆ ಚರ್ಚಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 27.02.2018 ರಂದು ಪೂರ್ವಾಹ್ನ 11.00 ಗಂಟೆಗೆ, ಕೊಠಡಿ ಸಂಖ್ಯೆ: 253, 2ನೇ ಹಂತ, 2ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇಲ್ಲಿ ನಡೆದ ಪರಿಶೀಲನಾ ಸಮಿತಿ ಸಭೆಯ ನಡವಳಿಗಳು:**

**ಸಭೆಯಲ್ಲಿ ಭಾಗವಹಿಸಿದವರು:**

ಅನುಬಂಧದಲ್ಲಿನ ಪಟ್ಟಿಯಂತೆ.

ಸರ್ಕಾರಿ ಅಧಿಸೂಚನೆ ಸಂಖ್ಯೆ: ಅಪಜೀ 17 ಇಪಿಸಿ 2012, ದಿನಾಂಕ: 22.03.2016 ರನ್ವಯ ಜಾರಿಗೊಳಿಸಲಾಗಿರುವ ಪ್ಲಾಸ್ಟಿಕ್ ನಿಷೇಧಕ್ಕೆ ಸಂಬಂಧಪಟ್ಟಂತೆ ರಚಿಸಲಾಗಿರುವ ಪರಿಶೀಲನಾ ಸಮಿತಿಯ ಅಧ್ಯಕ್ಷರಾದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿದರು.

ವಿಶೇಷ ನಿರ್ದೇಶಕರು, ತಾಂತ್ರಿಕ ಕೋಶ ಇವರು ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳ ಕಾರ್ಯಸೂಚಿಯನ್ನು ವಿವರಿಸಿದರು. ದಿನಾಂಕ: 24.07.2017 ರಂದು ನಡೆದ ಸಭೆಯ ನಡವಳಿಯನ್ವಯ ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆಯಿಂದ ತೆಗೆದುಕೊಂಡ ಕ್ರಮಗಳ ಬಗ್ಗೆ ಸಭೆಗೆ ವಿವರಗಳನ್ನು ತಿಳಿಸಿದರು.

ಪ್ಲಾಸ್ಟಿಕ್ ನಿಷೇಧ ಅಧಿಸೂಚನೆ ಜಾರಿಯಲ್ಲಿ ಬಂದಿದ್ದರೂ ಬಹಳಷ್ಟು ಕಡೆಯಲ್ಲಿ ಪ್ಲಾಸ್ಟಿಕ್ ಬಳಕೆ ಮಾಡುತ್ತಿರುವುದನ್ನು ಅದರಲ್ಲೂ ಮುಖ್ಯವಾಗಿ ಬಟ್ಟೆಯನ್ನು ಹೋಲುವ Non-Woven Sac poly propylene bags ನ್ನು ಬಹಳ ಹೆಚ್ಚಾಗಿ ಮಾರುಕಟ್ಟೆಯಲ್ಲಿ ಬಳಕೆ ಮಾಡುವ ಬಗ್ಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ ರವರು ಕಳವಳ ವ್ಯಕ್ತಪಡಿಸುತ್ತಾ, ಅವುಗಳ ಉತ್ಪಾದನೆ ಹಾಗೂ ಬಳಕೆಯನ್ನು ತಡೆಗಟ್ಟಲು ಕೂಡಲೇ ಕ್ರಮ ಕೈಗೊಳ್ಳುವಂತೆ ಮಾಲಿನ್ಯ ನಿಯಂತ್ರಣ ಮಂಡಳಿ, ಬಿಬಿಎಂಪಿ, ಹಾಗೂ ಪೌರಾಡಳಿತ ಇಲಾಖಾ ಅಧಿಕಾರಿಗಳಿಗೆ ಸೂಚಿಸಿದರು. ಅಲ್ಲದೇ ಸದರಿ ಪ್ಲಾಸ್ಟಿಕ್ ಬ್ಯಾಗ್‌ಗಳು ಬಟ್ಟೆಯನ್ನು ಹೋಲುವುದರಿಂದ ಜನ ಸಾಮಾನ್ಯರಿಗೆ ಈ ಬಗ್ಗೆ ಸರಿಯಾದ ಮಾಹಿತಿ ಹಾಗೂ ಅರಿವು ಇಲ್ಲದ ಕಾರಣ ಅವುಗಳನ್ನು ಬಳಸುತ್ತಿರಬಹುದಾದರಿಂದ ಜನರಲ್ಲಿ ಇಂತಹ Non-Woven Sac poly propylene bags ಗಳು ಸಹ ನಿಷೇಧಿತ ಪ್ಲಾಸ್ಟಿಕ್ ಬ್ಯಾಗ್‌ಗಳಾಗಿವೆ ಎಂದು ಅರಿವು ಮೂಡಿಸುವ ಬಗ್ಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಸೂಕ್ತ ಎಂದು ಸಭೆಯಲ್ಲಿ ನಿರ್ಣಹಿಸಲಾಯಿತು. ಎಂಪ್ರಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳು ಈ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ಸಭೆಯಲ್ಲಿ ನಿರ್ಣಯಿಸಲಾಯಿತು.

(ಕ್ರಮ: ಮಹಾ ನಿರ್ದೇಶಕರು, ಎಂಪ್ರಿ ಹಾಗೂ ಆಯುಕ್ತರು, ಬಿ.ಬಿ.ಎಂ.ಪಿ)

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರು ಎಳನೀರು ಮತ್ತು ಹಣ್ಣಿನ ರಸಗಳನ್ನು ಕುಡಿಯಲು ಬಳಸುವ ಸ್ಟ್ರಾ ಸಹ ಪ್ಲಾಸ್ಟಿಕಿನಿಂದ ತಯಾರಾಗಿದ್ದು, ಇದರಿಂದ ಪರಿಸರ ಮಾಲಿನ್ಯವಾಗುತ್ತಿರುವ ಕಾರಣ ಇದನ್ನು ಸಹ ನಿಷೇಧಿಸುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಕೋರಿದರು. ಅದರಂತೆ ಪ್ಲಾಸ್ಟಿಕ್ ಸ್ಟ್ರಾ ನ್ನು ನಿಷೇಧಿಸುವ ಬಗ್ಗೆ ಪ್ಲಾಸ್ಟಿಕ್ ನಿಷೇಧದ ಅಧಿಸೂಚನೆಗೆ ತಿದ್ದುಪಡಿ ತರಲು ಸಭೆಯಲ್ಲಿ ನಿರ್ಣಯಿಸಲಾಯಿತು.

(ಕ್ರಮ: ವಿಶೇಷ ನಿರ್ದೇಶಕರು, ತಾಂತ್ರಿಕ ಕೋಶ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ)

ಸರ್ಕಾರದ ಕಾರ್ಯದರ್ಶಿ (ಜೀವಿಪರಿಸ್ಥಿತಿ ಮತ್ತು ಪರಿಸರ) ಇವರು ಇ-ಕಾಮರ್ಸ್ ಕಂಪನಿಗಳಾದ ಸ್ನ್ಯಾಪ್‌ಡೀಲ್, ಫ್ಲಿಪ್‌ಕಾರ್ಟ್ ಮತ್ತು ಅಮೇಜಾನ್ ನಂತಹ ಆನ್‌ಲೈನ್ ಮಾರಾಟ ಸಂಸ್ಥೆಗಳು ಉತ್ಪನ್ನಗಳನ್ನು ಪೂರೈಸುವಾಗ ಪ್ಯಾಕೇಜಿಂಗ್ ಮಾಡಲು ಪ್ಲಾಸ್ಟಿಕ್ ಬಳಕೆಯಾಗುತ್ತಿದ್ದು, ಸದರಿ ಇ-ಕಾಮರ್ಸ್ ಸಂಸ್ಥೆಗಳಿಗೆ ತಿಳುವಳಿಕೆ ನೀಡಿ ಪ್ಲಾಸ್ಟಿಕ್ ಉಪಯೋಗವನ್ನು ನಿಲ್ಲಿಸಿ, ಪರಿಸರಕ್ಕೆ ಪೂರಕವಾದಂತಹ ವಸ್ತುಗಳನ್ನು ಪ್ಯಾಕೇಜಿಂಗ್‌ಗೆ ಬಳಸಲು ತಿಳಿಸಬಹುದೆಂದು ಸಭೆಗೆ ತಿಳಿಸಿದರು.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರು ಇ-ಕಾಮರ್ಸ್ ವಹಿವಾಟಿನಲ್ಲಿ ಫ್ಲಿಪ್‌ಕಾರ್ಟ್ ಮತ್ತು ಅಮೇಜಾನ್ ನಂತಹ ಸಂಸ್ಥೆಗಳು ಹಾಗೂ ಸಿದ್ಧಪಡಿಸಿದ ಆಹಾರಗಳನ್ನು ಪೂರೈಸುವ ಘಟಕಗಳಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಹಾಗೂ ಬಿ.ಬಿ.ಎಂ.ಪಿ ಯಿಂದ ಪ್ಲಾಸ್ಟಿಕ್‌ನ್ನು ಬಳಸದಂತೆ ಪತ್ರಗಳನ್ನು ಕಳುಹಿಸುವುದು ಸೂಕ್ತವೆಂದು ಸಲಹೆ ನೀಡಿದರು. ಅದರಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಬಿಬಿಎಂಪಿ ಒಂದು ವಾರದಲ್ಲಿ ಕ್ರಮ ವಹಿಸಲು ನಿರ್ಣಯಿಸಲಾಯಿತು.

(ಕ್ರಮ: ಆಯುಕ್ತರು, ಬಿಬಿಎಂಪಿ ಹಾಗೂ ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ)

ಜನರಲ್ಲಿ ಪ್ಲಾಸ್ಟಿಕ್ ನಿಷೇಧದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಇನ್ನಷ್ಟು ತೀವ್ರವಾಗಿ ಹಮ್ಮಿಕೊಳ್ಳಬೇಕಾಗಿದ್ದು, ಪ್ಲಾಸ್ಟಿಕ್‌ನಿಂದ ಪರಿಸರಕ್ಕೆ ಹಾಗೂ ಜನರ ಜೀವನದ ಮೇಲೆ ಆಗುತ್ತಿರುವ ಹಾನಿಯ ಬಗ್ಗೆ ಒಂದು ನಿಮಿಷ ಅವಧಿಯ ಕಿರುಚಿತ್ರವನ್ನು ತಯಾರಿಸಿ, ಅದನ್ನು ಚಿತ್ರ ಮಂದಿರಗಳಲ್ಲಿ ಚಲನಚಿತ್ರದ ಪ್ರದರ್ಶನದ ಪ್ರಾರಂಭದಲ್ಲಿ ಪ್ರಚುರ ಪಡಿಸಲು ಕ್ರಮ ಕೈಗೊಳ್ಳುವುದು ಸೂಕ್ತವೆಂದು ಸಭೆಯಲ್ಲಿ ಚರ್ಚಿಸಲಾಯಿತು. ಅದರಂತೆ ಕಿರು ಚಿತ್ರಗಳನ್ನು ಎಂಪ್ರಿ ಸಂಸ್ಥೆಯು ತಯಾರಿಸುವುದು ಹಾಗೂ ಬಿಬಿಎಂಪಿಯವರ ಸಹಕಾರದಿಂದ ಕಿರು ಚಿತ್ರವನ್ನು ನಗರದ ವಿವಿಧ ಚಿತ್ರ ಮಂದಿರಗಳಲ್ಲಿ ಉಚಿತವಾಗಿ ಪ್ರಸಾರ ಮಾಡಲು ಕ್ರಮ ವಹಿಸಲಾಗುವುದು ಎಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರು ಸಭೆಗೆ ತಿಳಿಸಿದರು. ಅದರಂತೆ, ಎಂಪ್ರಿ ಸಂಸ್ಥೆ ಈ ಬಗ್ಗೆ ಕರ್ನಾಟಕ ಅರಣ್ಯ ಇಲಾಖೆಯಲ್ಲಿ ತಯಾರಿಸಿರುವ ಕಿರು ಚಿತ್ರಗಳ ಮಾದರಿಯಲ್ಲಿಯೇ ಚಿತ್ರಗಳನ್ನು ತಯಾರಿಸಿ, ಪ್ರಚಾರಕ್ಕಾಗಿ ಬಿಬಿಎಂಪಿ ಗೆ ನೀಡಲು ನಿರ್ಣಯಿಸಲಾಯಿತು.

(ಕ್ರಮ: ಮಹಾ ನಿರ್ದೇಶಕರು, ಎಂಪ್ರಿ ಹಾಗೂ ಆಯುಕ್ತರು, ಬಿ.ಬಿ.ಎಂ.ಪಿ)

ಎಂಪ್ರಿ ಸಂಸ್ಥೆಯ ಮಹಾ ನಿರ್ದೇಶಕರು, ಪ್ಲಾಸ್ಟಿಕ್ ನಿಷೇಧದ ಬಗ್ಗೆ ಅರಿವು ಮೂಡಿಸಲು ಸಂಸ್ಥೆಯಿಂದ ಕೈಗೊಂಡಿರುವ ಕ್ರಮಗಳ ಮಾಹಿತಿಯನ್ನು ಸಭೆಗೆ ನೀಡಿದರು.

ಪೌರಾಡಳಿತ ನಿರ್ದೇಶನಾಲಯದ ವತಿಯಿಂದ ಹಾಜರಿದ್ದ ಅಧಿಕಾರಿಯವರು ಪ್ಲಾಸ್ಟಿಕ್ ನಿಷೇಧ ಆದೇಶದ ಅನುಷ್ಠಾನದ ಬಗ್ಗೆ ಮಾಹಿತಿಯನ್ನು ನೀಡುತ್ತಾ ಇಲ್ಲಿಯವರೆಗೂ ಪ್ಲಾಸ್ಟಿಕ್ ನಿಷೇಧ ಆದೇಶವನ್ನು ಉಲ್ಲಂಘಿಸಿದಂತಹ ಪ್ರಕರಣಗಳಿಂದ ರೂ. 21,86,000/- ದಂಡ ವಸೂಲಿ ಮಾಡಿರುವ ಬಗ್ಗೆ ಸಭೆಗೆ ವರದಿ ನೀಡಿದರು.

ಜೈವಿಕ ವಿಘಟನ ಪ್ಲಾಸ್ಟಿಕ್ (Bio-Degradable Plastic) ನ್ನು ಪ್ಲಾಸ್ಟಿಕ್‌ಗೆ ಪರ್ಯಾಯವಾಗಿ ಬಳಸುವ ಬಗ್ಗೆ ಕೋರಿಕೆ ಬರುತ್ತಿದ್ದು, ಈ ಬಗ್ಗೆ ಈ ಸಮಿತಿಯಿಂದ ಸೂಕ್ತ ಹಿಂಬರಹ ನೀಡುವ ಕ್ರಮ ಕೈಗೊಳ್ಳಬೇಕಾಗಿದೆ ಎಂದು ತಿಳಿಸಿದರು. ಅದಕ್ಕೆ ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರು Bio-Degradable Plastic ಎನ್ನಲಾದ ಉತ್ಪನ್ನಗಳ ಸ್ಯಾಂಪಲ್‌ಗಳನ್ನು ವೈಜ್ಞಾನಿಕವಾಗಿ ಪರಿಶೀಲಿಸಿ, ವರದಿಯನ್ನು ನೀಡುವಂತೆ CIPET ಸಂಸ್ಥೆಯನ್ನು ಕೋರಲಾಗಿದ್ದು, CIPET ಸಂಸ್ಥೆಯು ನೀಡಿರುವ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ತಿಳಿಸಿದರು. ಸದರಿ ವರದಿಯನ್ನು ಇದೇ ವಿಷಯಕ್ಕಾಗಿ ರಚಿಸಿರುವ ತಜ್ಞರ ಸಮಿತಿಯ ಮುಂದೆ ಮಂಡಿಸಿ ಸದರಿ ತಜ್ಞ ಸಮಿತಿ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಸಲ್ಲಿಸಿದ ನಂತರ ಈ ಬಗ್ಗೆ ನಿಯಮಾನುಸಾರ ಕ್ರಮ ತೆಗೆದುಕೊಳ್ಳುವುದು ಸೂಕ್ತವೆಂದು ಸಭೆಯಲ್ಲಿ ನಿರ್ಣಯಿಸಲಾಯಿತು. ಕೂಡಲೇ ತಜ್ಞ ಸಮಿತಿಯ ಸಭೆ ಕರೆಯಲು ಸಭೆಯಲ್ಲಿ ತೀರ್ಮಾನಿಸಲಾಯಿತು.

(ಕ್ರಮ: ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ)

ಸಭೆಯಲ್ಲಿ ಹಾಜರಿದ್ದ ಬಿಬಿಎಂಪಿ ಅಧಿಕಾರಿಯವರು ಹೈದ್ರಾಬಾದ್, ಗುಜರಾತ್ ರಾಜ್ಯಗಳಿಂದ ಮತ್ತು ಬೆಂಗಳೂರು ಸುತ್ತಮುತ್ತಲಿನ ಊರುಗಳಿಂದ ಪ್ಲಾಸ್ಟಿಕ್ ಬ್ಯಾಗ್‌ಗಳು ಬೆಂಗಳೂರು ನಗರಕ್ಕೆ ಬೆಳಗ್ಗೆ 4.00 ಗಂಟೆಗೆ ಮೊದಲು ಸರಬರಾಜು ಆಗುತ್ತಿದ್ದು, ಇವುಗಳನ್ನು ಮನೆಗಳಲ್ಲಿ ಸಂಗ್ರಹಿಸಿ ತದನಂತರ ಗ್ರಾಹಕರಿಗೆ ವಿತರಿಸಲಾಗುತ್ತಿರುವ ಬಗ್ಗೆ ಮಾಹಿತಿ ಇದೆ ಎಂದು ಸಭೆಗೆ ತಿಳಿಸಿದ್ದು, ಅಂತಹ ಮನೆಗಳಿಗೆ ದಾಳಿ ಮಾಡಿದಾಗ ಅವುಗಳನ್ನು ನಿಷೇಧ ಅಧಿಸೂಚನೆಯಲ್ಲಿ ವಿನಾಯಿತಿ ನೀಡಿರುವ ಪ್ಯಾಕೇಜಿಂಗಾಗಿ ಬಳಸುತ್ತಿರುವ ಬಗ್ಗೆ ಮಾಹಿತಿಯನ್ನು ನೀಡಿ ಸರ್ಕಾರದ ನಿಷೇಧದ ಆದೇಶದಲ್ಲಿ ನೀಡಿರುವ ವಿನಾಯಿತಿಯ ಲಾಭವನ್ನು ಪಡೆಯುತ್ತಿರುವುದಾಗಿ ಸಭೆಗೆ ತಿಳಿಸಿದರು. ಅಲ್ಲದೇ ಪ್ಲಾಸ್ಟಿಕ್ ನಿಷೇಧ ಅಧಿಸೂಚನೆಗೆ ಕ್ಯಾರಿ ಬ್ಯಾಗ್ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರವು 2016 ರಲ್ಲಿ ರೂಪಿಸಿರುವ ಪ್ಲಾಸ್ಟಿಕ್ ತ್ಯಾಜ್ಯ (ನಿರ್ವಹಣೆ ಮತ್ತು ನಿಭಾವಣೆ) ನಿಯಮಗಳು 2016ರ ನಿಯಮಾವಳಿಯಂತೆ ದಿನಾಂಕ: 18.04.2017 ರಂದು ಸರ್ಕಾರವು ತಂದಿರುವ ತಿದ್ದುಪಡಿಯ ಕಾರಣ ಪ್ಲಾಸ್ಟಿಕ್ ಗ್ರಾಸರಿ ಶಾಪ್‌ಗಳವರು ಈ ಬ್ಯಾಗ್‌ಗಳನ್ನು ಬಹಳಷ್ಟು ಬಳಕೆ ಮಾಡುತ್ತಿರುವುದನ್ನು ಸಹ ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಈಗಾಗಲೇ ಸೂಕ್ತ ತಿದ್ದುಪಡಿ ತರಲು ಕರಡು ತಿದ್ದುಪಡಿ ಆದೇಶದ ಮತ್ತು ವಿವಿಧ ಇಲಾಖೆಗಳ ಅಭಿಪ್ರಾಯ ಪಡೆದಿದ್ದು, ಕೂಡಲೇ ತಿದ್ದುಪಡಿಗೆ ಕರಡು ಸಚಿವ ಸಂಪುಟ ಟಿಪ್ಪಣಿಯನ್ನು ತಯಾರಿಸಲು ನಿರ್ಣಯಿಸಲಾಯಿತು.

(ಕ್ರಮ: ವಿಶೇಷ ನಿರ್ದೇಶಕರು, ತಾಂತ್ರಿಕ ಕೋಶ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ)

ಸಭೆಯಲ್ಲಿ ಹಾಜರಿದ್ದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆಯವರು ಪ್ಲಾಸ್ಟಿಕ್ ಉತ್ಪಾದನೆ ಮಾಡುವ ಹಾಗೂ ಪ್ಲಾಸ್ಟಿಕ್ ವಸ್ತುಗಳನ್ನು ಬಳಕೆ ಮಾಡುವ ಅಂಗಡಿಗಳು, ಮಾಲ್‌ಗಳು, ಫೈವ್ ಸ್ಟಾರ್ ಹೋಟೆಲ್‌ಗಳು, ಕ್ಲಬ್‌ಗಳು, ಕಲ್ಯಾಣ ಮಂಟಪಗಳು ಮತ್ತು ಸಮುದಾಯ ಭವನಗಳು ಇನ್ನು ಮುಂತಾದವುಗಳಿಗೆ ಪ್ಲಾಸ್ಟಿಕ್ ನಿಷೇಧ ಅಧಿಸೂಚನೆ ಪಾಲನೆ ಮಾಡದಿದ್ದಲ್ಲಿ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂಬುದಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪತ್ರಗಳನ್ನು ಕಳುಹಿಸುವುದು ಸೂಕ್ತ ಎಂದರು. ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ, ಬಿಬಿಎಂಪಿ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಈ ಕೂಡಲೇ ಸೂಕ್ತ ಸುತ್ತೋಲೆಗಳನ್ನು ಒಂದು ವಾರದೊಳಗಾಗಿ ಹೊರಡಿಸಲು ನಿರ್ಣಯಿಸಲಾಯಿತು.

(ಕ್ರಮ: ಆಯುಕ್ತರು, ಬಿಬಿಎಂಪಿ ಹಾಗೂ ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ)

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಪೌರಾಡಳಿತ ನಿರ್ದೇಶನಾಲಯ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರು ಪ್ಲಾಸ್ಟಿಕ್ ನಿಷ್ಷೇಧದ ಅನುಷ್ಠಾನದ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಸಿಕ ಪ್ರಗತಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕೆಂದು ಸೂಚಿಸಿದರು ಹಾಗೂ ಪರಿಶೀಲನಾ ಸಮಿತಿ ಸಭೆಯನ್ನು ಕನಿಷ್ಠ ಪ್ರತಿ ಎರಡು ತಿಂಗಳಿಗೊಮ್ಮೆ ನಡೆಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

(ಕ್ರಮ: ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಆಯುಕ್ತರು, ಬಿಬಿಎಂಪಿ, ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಮಹಾ ನಿರ್ದೇಶಕರು, ಎಂಪ್ರಿ, ವಿಶೇಷ ನಿರ್ದೇಶಕರು, ತಾಂತ್ರಿಕ ಕೋಶ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ ಹಾಗೂ ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ)

ಸಭೆಯಲ್ಲಿ ಹಾಜರಿದ್ದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳಿಗೆ ಗ್ರಾಮ ಪಂಚಾಯತ್ ಮಟ್ಟದಲ್ಲಿ ಜನರಿಗೆ ಪ್ಲಾಸ್ಟಿಕ್ ನಿಷೇಧದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಕೈಗೊಳ್ಳುವಂತೆ ಸೂಚಿಸಲಾಯಿತು.

(ಕ್ರಮ: ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)

ಕಾರ್ಯದರ್ಶಿಗಳು, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ ರವರು ಮಾತನಾಡುತ್ತಾ, ಫ್ಲೆಕ್ಸ್‌ಗಳನ್ನು ನಿಷೇಧಿಸಿದ್ದರೂ ಕೂಡ ಎಲ್ಲಾ ಕಡೆಗಳಲ್ಲಿ ಯಥೇಚ್ಛವಾಗಿ ಫ್ಲೆಕ್ಸ್‌ಗಳನ್ನು ಬಳಕೆ ಮಾಡುತ್ತಿರುವುದನ್ನು ಸಭೆಯ ಗಮನಕ್ಕೆ ತಂದು, ಈ ಬಗ್ಗೆ ಬಿಬಿಎಂಪಿ ಹಾಗೂ ಪೌರಾಡಳಿತ ನಿರ್ದೇಶನಾಲಯ ಇವುಗಳನ್ನು ತಡೆಗಟ್ಟಲು ಸೂಕ್ತ ಕ್ರಮವನ್ನು ಕೈಗೊಳ್ಳದಿದ್ದಲ್ಲಿ ಇದರಿಂದ ಪರಿಸರದ ಮೇಲೆ ಬಹಳವೆ ಪರಿಣಾಮ ಬೀರಲಿದೆ ಎಂದರು. ಈ ಬಗ್ಗೆ ಬಿಬಿಎಂಪಿ ಆಯುಕ್ತರು ಹಾಗೂ ಪೌರಾಡಳಿತ

ನಿರ್ದೇಶಕರು ಸೂಕ್ತ ಕ್ರಮ ಕೈಗೊಳ್ಳುವಂತೆ ತಮ್ಮ ವ್ಯಾಪ್ತಿಯ ಅಧಿಕಾರಿಗಳಿಗೆ ಸೂಚನೆ ನೀಡಲು ಸಭೆಯಲ್ಲಿ ನಿರ್ಣಯಿಸಲಾಯಿತು.

(ಕ್ರಮ: ಆಯುಕ್ತರು, ಬಿಬಿಎಂಪಿ ಹಾಗೂ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ)

ವಂದನೆಗಳೊಂದಿಗೆ ಸಭೆಯು ಮುಕ್ತಾಯವಾಯಿತು.

**ಸಂಖ್ಯೆ: ಅಪಜೀ 31 ಇಎನ್‌ಜಿ 2016**

(ವಂದಿತಾ ಶರ್ಮ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ

ಇವರಿಗೆ:-

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು.
5. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು
6. ಜಂಟಿ ಆಯುಕ್ತರು (ಘನ ತ್ಯಾಜ್ಯ ನಿರ್ವಹಣೆ), ಬಿ.ಬಿ.ಎಂ.ಪಿ, ಬೆಂಗಳೂರು.
7. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು.
8. ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು.
9. ಮಹಾನಿರ್ದೇಶಕರು, ಪರಿಸರ ನಿರ್ವಹಣೆ ಮತ್ತು ನೀತಿಸಂಶೋಧನಾ ಸಂಸ್ಥೆ, ಹಸಿರು ಭವನ, ದೊರೆಸಾನಿಪಾಳ್ಯ, ಫಾರೆಸ್ಟ್ ಕ್ಯಾಂಪಸ್, ವಿನಾಯಕ ನಗರ ವೃತ್ತ, ಜೆ.ಪಿ.ನಗರ, 5ನೇ ಹಂತ, ಬೆಂಗಳೂರು.
10. ಶ್ರೀ ಎಸ್.ವೈ. ಶಿರಾಳಿ, ನಿರ್ದೇಶಕರು ಮತ್ತು ಮುಖ್ಯಸ್ಥರು, ಸೆಂಟ್ರಲ್ ಇನ್ಸಿಟ್ಯೂಟ್ ಆಫ್ ಪ್ಲಾಸ್ಟಿಕ್ ಇಂಜಿನಿಯರಿಂಗ್ ಟೆಕ್ನಾಲಜಿ, ಮೈಸೂರು.

<u>ಪ್ರತಿ:</u>

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಇವರ ಹಿರಿಯ ಆಪ್ತ ಕಾರ್ಯದರ್ಶಿಯವರಿಗೆ.
2. ಸರ್ಕಾರದ ಕಾರ್ಯದರ್ಶಿ (ಜೀವಿಪರಿಸ್ಥಿತಿ ಮತ್ತು ಪರಿಸರ), ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಇವರ ಹಿರಿಯ ಆಪ್ತ ಕಾರ್ಯದರ್ಶಿಯವರಿಗೆ.
3. ವಿಶೇಷ ನಿರ್ದೇಶಕರು(ತಾಂತ್ರಿಕ ಕೋಶ), ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಇವರ ಆಪ್ತ ಕಾರ್ಯದರ್ಶಿಯವರಿಗೆ.